ಬಿಸಿಲಿನ ಧಗೆಯಲ್ಲಿ ಸೋತು ಹೋಗಿದ್ದರೂ ತರಬೇತು ಯಶಸ್ವಿಯಾಗಿ ನಡೆದ ಬಗ್ಗೆ ಆನಂದಗೊಂಡ ಅರಬಿ 'ಗುಡ್... ಇವತ್ತಿನ ಹಾಗೆಯೇ ತರಬೇತಿ ಮುಂದುವರೆದರೆ ನಾವೇ ಗೆಲ್ಲುವುದರಲ್ಲಿ ಯಾವ ಸಂಶಯವೂ ಇಲ್ಲ' ಎಂದ. ಆತ ಉತ್ಸಾಹದಲ್ಲಿರುವುದನ್ನು ಕಂಡು ಸಮಯ ನೋಡಿ, 'ನನ್ನ ಸಂಬಳದ ಬಗೆಗೆ ಇನ್ನೂ ಏನೂ ಹೇಳಿಲ್ಲ ನೀವು...' ಅಂದ ದೀಪಕ್.

'ಮತ್ತೆ ಅದೇ ಮಾತು ಆಡಬೇಡ. ಈಗ ನನ್ನ ಇಡೀ ಧ್ಯಾನ ದೋಹಾ ಸ್ಪರ್ಧೆಯ ಮೇಲೆ. ಇರುವ ಎಲ್ಲಾ ಶಕ್ತಿ ಯುಕ್ತಿ ಬಳಸಿ ನಾವು ಸಿದ್ಧರಾಗಬೇಕು. ನಿನ್ನನ್ನು ಉಪವಾಸ ಹಾಕುವುದಿಲ್ಲ ಎಂದು ಮೊದಲೇ ಹೇಳಿದ್ದೇನೆ. ನನ್ನಷ್ಟೇ ಉತ್ಸಾಹ ನೀನೂ ತೋರಿಸಬೇಕು. ಆಸ್ಥೆಯಿಂದ ಕೆಲಸ ಮಾಡು. ನಾವು ದೋಹಾದಲ್ಲಿ ವಿಜಯಿಗಳಾಗಬೇಕು. ಗಾದಾಳಿಗೆ ಪಾಸ್‌ಪೋರ್ಟ್ ಮಾಡಿಸಬೇಕು. ಆರೋಗ್ಯ ದೃಢೀಕರಣ ಪತ್ರ ಮಾಡಿಸಬೇಕು. ವಿಮಾನ ಟಿಕೇಟು ಖರೀದಿಸಬೇಕು. ಹೋಟೆಲಿನಲ್ಲಿ ರೂಮು ಕಾದಿರಿಸಬೇಕು. ಎಲ್ಲವೂ ಹಣ ಖರ್ಚಾಗುವ ಬಾಬತ್ತುಗಳೇ. ನಮ್ಮ ಗುರಿ ತಲುಪುವಲ್ಲಿ ಏನೆಲ್ಲಾ ಕೆಲಸ ಕೈಗೊಳ್ಳಬೇಕೋ ಅದನ್ನೆಲ್ಲ ಮಾಡಬೇಕು. ನನಗೆ ಏನೂ ಕಾರಣ, ಸಬೂಬು ಬೇಕಿಲ್ಲ. ಸ್ವಲ್ಪ ಸ್ಥಿತಿಗತಿ ಒಳ್ಳೆಯದಿದ್ದರೆ ನಾನೂ ಒಬ್ಬ ಐರೋಪ್ಯ ತರಬೇತುದಾರನನ್ನು ನೇಮಿಸಿಕೊಳ್ಳುತ್ತಿದ್ದೆ. ಕೈಕಟ್ಟಿಹೋಗಿದೆ, ಆದ್ದರಿಂದ ಹಕ್ಕಿಸಾಕಣೆಯಲ್ಲಿ ಹೆಚ್ಚೇನೂ ಗೊತ್ತಿಲ್ಲದಿದ್ದರೂ ನಿನಗೆ ಒಂದು ಅವಕಾಶ ಕೊಟ್ಟಿದ್ದೇನೆ. ಯಾವ ಹೊರಗಿನ ತರಬೇತಿಯವನಿಗೂ ನನಗಿಂತ ಜಾಸ್ತಿ ತಿಳಿವಳಿಕೆ ಇಲ್ಲ. ಇದನ್ನು ತಿಳಿದುಕೋ. ಮತ್ತೆ ನಿಮಗ್ಯಾಕೆ ಇನ್ನೂ ದೊಡ್ಡ ಪ್ರಶಸ್ತಿಗಳು ಬಂದಿಲ್ಲ ಅಂತ ನೀನು ಕೇಳಬಹುದು. ಯಾರೇ ಆದರೂ ಕೇಳುವಂತ ಮಾತೇ. ಅದಕ್ಕೇ ನಾನೂ ಸ್ಪರ್ಧೆಗಳನ್ನು ಗೆಲ್ಲಬೇಕು, ಪ್ರಶಸ್ತಿಗಳನ್ನು ಪಡೆಯಬೇಕು. ನನ್ನಲ್ಲಿ ಒಳ್ಳೆಯ ಗಿಡುಗಗಳಿರಲಿಲ್ಲ, ಇದ್ದ ಗಿಡುಗಗಳ ಆರೈಕೆ ಸರಿಯಾಗಿರಲಿಲ್ಲ, ಸೂಕ್ತ ಸಹಾಯಕರಿಲ್ಲದೆ ಸರಿಯಾಗಿ ತರಬೇತಿ ನೀಡಲು ಸಾಧ್ಯವಾಗಿಲ್ಲ ಎಂದೆಲ್ಲ ನನ್ನ ಸಮಸ್ಯೆಗಳನ್ನು ಯಾರೆದುರೂ ಹೇಳಲು ಸಾಧ್ಯವಿಲ್ಲ. ಅವನ ಕುಂಟುನೆಪಗಳು ಇದ್ದದ್ದೇ ಅಂದಾರು. ಅದಕ್ಕೇ ನನ್ನಲ್ಲಿರುವ ಎಲ್ಲ ಸಂಪನ್ಮೂಲಗಳನ್ನು ಪೂರ್ತಿಯಾಗಿ ಬಳಸಿಕೊಂಡು ಈ ಬಾರಿ ಮಾಡು ಇಲ್ಲವೇ ಮಡಿ ಪ್ರಯತ್ನ ನನ್ನದು. ಅರಬ್ ಜನತೆ ನನ್ನನ್ನು ಒಬ್ಬ ಒಳ್ಳೆಯ ಗಿಡುಗತಜ್ಞ ಎಂದು ಗುರುತಿಸಬೇಕಾದರೆ ನಾನು ಗೆಲ್ಲಬೇಕು. ನನಗೆ ಬೇರೆ ದಾರಿ ಇಲ್ಲ' ಎಂದು ಮಾತು ಬೇರೆಡೆಗೆ ತಿರುಗಿಸಿ ದೀಪಕನಿಗೆ ಮಾತಿಗೆ ಅವಕಾಶವೇ ಕೊಡದೆ ಮನೆಯ ಗೇಟಿನ ಬಳಿಯವರೆಗೂ ತನ್ನದೇ ಮಾತು ಮುಂದುವರೆಸುತ್ತಾ ಬಂದಿದ್ದ ಅರಬಿ.

ಮನೆಯೆದುರು ಆತ ವಾಹನ ನಿಲ್ಲಿಸುತ್ತಿದ್ದಂತೆ ದೀಪಕನ ಸಹನೆ ಕಟ್ಟೊಡೆಯಿತು. 'ನೀವು ಹೇಳಿದ್ದೆಲ್ಲವನ್ನೂ ಕೇಳಿಸಿಕೊಂಡಿದ್ದೇನೆ. ರಣಬಿಸಿಲಿನಲ್ಲಿ ನಿಮ್ಮೊಂದಿಗೆ ಹೆಗಲು ಕೊಟ್ಟು ಶಕ್ತಿಮೀರಿ ಶ್ರಮಿಸಲು ಸಿದ್ಧನಿದ್ದೇನೆ. ಆದರೆ ನಾನು ಉದ್ಯೋಗ ಅರಸಿ ಬಂದವನು. ನನಗೆ ನನ್ನದೇ ಹೊಣೆಗಾರಿಕೆಗಳು ಇವೆ. ನನಗೆ ಎಷ್ಟು ಸಂಬಳ ಸಿಗುತ್ತದೆ, ಇಲ್ಲೆಷ್ಟು ಖರ್ಚುಮಾಡಬಹುದು, ಊರಿನಲ್ಲಿರುವ ನನ್ನ ಕುಟುಂಬಕ್ಕೆ ಎಷ್ಟು ಹಣ ಕಳುಹಿಸಬಹುದು ಎಂದೆಲ್ಲ ಲೆಕ್ಕಾಚಾರದಲ್ಲಿ ಜೀವನ ನಡೆಸಬೇಕಾಗಿದೆ. ನೀವು ನನ್ನ ಸಂಬಳ ಎಷ್ಟೆಂದು ಹೇಳಬೇಕು... ಅದು ತಿಳಿದೇ ನಾನು ಮುಂದೆ ಹೆಜ್ಜೆಯಿಡುವುದು' ಒಂದೇ ಉಸುರಿನಲ್ಲಿ ದನಿಯೇರಿಸಿ ನುಡಿದ ದೀಪಕ್.

ಅರಬಿ ವ್ಯಗ್ರನಾಗಿ ವಾಹನದಿಂದ ಇಳಿದು ದೀಪಕನ ಮುಖವನ್ನೇ ದಿಟ್ಟಿಸಿ ನೋಡಿ ಗಾದಾಳನ್ನು ಕೈಗೆತ್ತಿಕೊಂಡ. 'ನಿನ್ನಲ್ಲಿ ಇಷ್ಟೆಲ್ಲ ಹೇಳಿದ್ದು ವ್ಯರ್ಥವಾಯಿತು. ಸಂಬಳದ ಬಗೆಗೆ ತಲೆಕೆಡಿಸಿಕೊಳ್ಳದೆ ನಮ್ಮ ಗೆಲುವಿನ ಮೇಲೆ ಲಕ್ಷ್ಯವಿಟ್ಟುಕೊಳ್ಳಬೇಕು ಎನ್ನುವ ನನ್ನ ಮಾತಿಗೆ